# ಸ್ಥಿತಪ್ರಜ್ಞನ ಲಕ್ಷಣ



**ಸ್ವಾಮಿ ಶಿವಕಾಂತಾನಂದ**

ಭಗವದ್ಗೀತೆಯಲ್ಲಿ ಬರುವ ಹತ್ತುಹಲವು ನೈತಿಕ, ಆಧ್ಯಾತ್ಮಿಕ ಆದರ್ಶಗಳಲ್ಲಿ 'ಸ್ಥಿತಪ್ರಜ್ಞ'ನ ಲಕ್ಷಣ ಅತ್ಯಂತ ಮಹತ್ವದ್ದಾಗಿದೆ. ಇದನ್ನು ಕುರಿತು ಬರೆದಿರುವ ಲೇಖಕರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಸಂಚಾಲಕರಾಗಿದ್ದಾರೆ. ಅವರು ಉತ್ತಮ ವಾಗ್ಮಿ ಹಾಗೂ ಬರಹಗಾರರು.

ಭಗವದ್ಗೀತೆಯು ದೈನಂದಿನ ಜೀವನಕ್ಕಾಗಿ, ಅದರಲ್ಲಿಯೂ ಆಧುನಿಕ ಯುಗಕ್ಕಾಗಿ ಪ್ರಾಚೀನ ಶಾಸ್ತ್ರಗಳ ಪೈಕಿ ಅತ್ಯಂತ ಉಪಯುಕ್ತವಾಗಿರುವ ಅನುಷ್ಠಾನ ಗ್ರಂಥ. ಗೀತೆಯ ತಾತ್ಪರ್ಯ ಎಲ್ಲ ಚಟುವಟಿಕೆಯ ನಡುವೆಯೇ ಮಾಡಬೇಕಾದ ಆಧ್ಯಾತ್ಮಿಕ ಸಾಧನೆ. ವೈಜ್ಞಾನಿಕತೆ, ತಾಂತ್ರಿಕತೆ, ಆರ್ಥಿಕ ಅಭಿವೃದ್ಧಿಯ ಪರಾಕಾಷ್ಠೆಗಳ ಹಿಂದೆ ನಾಗಾಲೋಟದಿಂದ ಓಡುತ್ತಿರುವ ಸ್ಪರ್ಧಾ ಜಗತ್ತಿನ ವಿಶ್ವ ನಾಗರಿಕರಿಗಾಗಿಯೇ (Global citizens of this competitive world) ಹೇಳಿ ಮಾಡಿಸಿದೆಯೇನೋ ಎಂಬಂತಿರುವ ಶ್ರೇಷ್ಠವಾದ ಅನುಷ್ಠಾನ ಗ್ರಂಥ.

ಪ್ರಸ್ಥಾನ ಗ್ರಂಥಗಳಿಗಾಗಿ ಸ್ಮೃತಿರಾಶಿಯಿಂದ ಭಗವದ್ಗೀತೆಯನ್ನು ಮಾತ್ರ ಆಯ್ದುಕೊಂಡಿರುವುದಕ್ಕೆ ಕಾರಣ, ಈ ಗೀತೋಪದೇಶಗಳ ಮಹತ್ವ ಮತ್ತು ಶ್ರೇಷ್ಠತೆ. ಸ್ವಾಮಿ ರಂಗನಾಥಾನಂದಜಿಯವರು ಹೇಳುತ್ತಾರೆ, ''ಹಿಂದಿನ ಕಾಲದಲ್ಲಿ ಜನರು ಸ್ವಲ್ಪ ಮನಶ್ಶಾಂತಿಗಾಗಿಯೋ, ಪುಣ್ಯ ಕೆಲಸವೇನೋ (ಎಂಬಂತೆ) ಗೀತೆಯನ್ನು ಓದುತ್ತಿದ್ದರು. ಈ ಗ್ರಂಥವು ಗಾಢವಾದ ಪ್ರಯೋಗಿಕತೆಯಿಂದ ಕೂಡಿದೆ ಎಂಬುದನ್ನು, ಪೂರ್ಣವಾಗಿ ವಿಕಾಸ ಹೊಂದಿದ ಮಾನವ ಸಮಾಜವನ್ನು ಸೃಷ್ಟಿಸಲು ನೆರವಾಗುವಂತಹ ಸಾಮರ್ಥ್ಯವುಳ್ಳ ಪ್ರಾಯೋಗಿಕ ವೇದಾಂತದ ಮಹಾಕೃತಿ ಇದೆಂಬುದನ್ನು ಈ ಹಿಂದೆ ನಾವೆಂದೂ ಮನಗಂಡಿರಲಿಲ್ಲ''. *(ಭಗವದ್ಗೀತೆಯ ವಿಶ್ವಸಂದೇಶ- ಸಂಪುಟ ೧, ಪು.೧)*

''**ಸ್ಥಿತಪ್ರಜ್ಞಸ್ಯ ಕಾ ಭಾಷಾ**'' *(೨.೫೪)* ಎಂಬ ಅರ್ಜುನನ ಪ್ರಶ್ನೆಯಿಂದ ಆರಂಭವಾಗುವ ಗೀತೆಯ ೨ನೆಯ ಅಧ್ಯಾಯದ ಕೊನೆಯ ಪಾದವನ್ನು ಸ್ಥಿತಿಪ್ರಜ್ಞ **ದರ್ಶನ**ವೆಂದೂ ಕರೆಯುತ್ತಾರೆ. ಇದರಲ್ಲಿರುವ ಶ್ರೀಕೃಷ್ಣನ ಬೋಧನೆ, ಗೀತೆಯ ಸಾರವನ್ನು ಒಳಗೊಂಡಿರುವ '**ಸ್ಥಿತಪ್ರಜ್ಞಯೋಗ**'ವೆಂದೇ ಹೇಳಬಹುದು. ಇದನ್ನು ಸ್ಥಿತ ಪ್ರಜ್ಞದರ್ಶನವೆಂದೂ ಕರೆಯುತ್ತಾರೆ. ಮಹಾಭಾರತದ ಪರ್ವಗಳು ಹದಿನೆಂಟು, ಪಾಂಡವರ ಕೌರವರ ನಡುವೆ ಇದ್ದದ್ದು ಒಟ್ಟು ಹದಿನೆಂಟು ಅಕ್ಷೌಹಿಣೀ ಸೇನೆ, ಕುರುಕ್ಷೇತ್ರ ನಡೆದದ್ದು ಹದಿನೆಂಟು ದಿನಗಳು, ಶ್ರೀಕೃಷ್ಣನು ಇಲ್ಲಿ ಅರ್ಜುನನ ಪ್ರಶ್ನೆಗೆ ಹದಿನೆಂಟು ಶ್ಲೋಕಗಳ ಮೂಲಕ ಉಪದೇಶವನ್ನು ನೀಡಿದ್ದಾನೆ. ಮನಸ್ಸು ಮತ್ತು ಇಂದ್ರಿಯಗಳನ್ನು ಹೇಗೆ ನಿಗ್ರಹಿಸುವುದು, ಕ್ಷಣಕಾಲ ಮೈಮರೆತರೂ ಇಂದ್ರಿಯ ಆಕರ್ಷಣೆಗಳಿಂದ ಎಂತಹ ವಿಪತ್ತುಗಳಿಗೆ ಒಳಗಾಗುತ್ತೇವೆ, ಕಾಮ-ಕ್ರೋಧಾದಿಗಳು ಮನಸ್ಸಿನಲ್ಲಿ ಏಳದಂತೆ ಹೇಗೆ ನಿಗ್ರಹಿಸುವುದು, ಬ್ರಾಹ್ಮೀಸ್ಥಿತಿ

ಯನ್ನು ಹೇಗೆ ಪಡೆಯುವುದು — ಇವನ್ನು ಸಂಕ್ಷಿಪ್ತವಾಗಿ, ಸುಂದರವಾಗಿ, ವಿವರಿಸಿದ್ದಾನೆ ಶ್ರೀಕೃಷ್ಣ.

ಗೀತೆಯು ಅನುಷ್ಠಾನ ವೇದಾಂತ. ಗೀತಾಧ್ಯಾನ ಶ್ಲೋಕಗಳು ಹೇಳುವಂತೆ, ಅದು ಉಪನಿಷತ್ತುಗಳ ಸಾರ. ಜೀವನ್ಮುಕ್ತಾವಸ್ಥೆಯನ್ನು ಹೊಂದಿದ್ದರೂ ಸಹ ಕರ್ಮವನ್ನು ತ್ಯಜಿಸದೆ, ಲೋಕಸಂಗ್ರಹಕ್ಕಾಗಿ ನಡೆಸುವ ಪಾರಮಾರ್ಥಿಕ ಜೀವನ. ಯೋಗದಲ್ಲಿ ಬುದ್ಧಿಯನ್ನು ನೆಲೆಗೊಳಿಸಿ ಕಡೆಗಾಲದಲ್ಲಿ ಭಗವಂತನನ್ನು ಸ್ಮರಿಸುತ್ತಾ ವಿಷ್ಣುಪದವನ್ನೂ ಹೇಗೆ ಪಡೆಯುವುದು ಎಂಬುದನ್ನು ಅನೇಕ ಮಾರ್ಗಗಳ ಮೂಲಕ ಬೋಧಿಸುವ ಜೀವನ ಕೈಪಿಡಿ, ಚತುರ್ಯೋಗ ಸಮನ್ವಯದ ಗೀತೆ.

ಎರಡನೆಯ ಅಧ್ಯಾಯದಲ್ಲಿ '**ಅಶೋಚ್ಯಾನನ್ವಶೋಚಸ್ತ್ವಂ....**' *(೨.೧೧)* ದಿಂದ ಹಿಡಿದು **ಅವ್ಯಕ್ತೋಽಯಮಚಿಂತ್ಯೋಽಯಂ...** *(೨.೨೫)* ವರೆಗೂ ಜ್ಞಾನಯೋಗವನ್ನೇ ಬೋಧಿಸಿ ಆತ್ಮವಿಚಾರವನ್ನು ನೀಡಿದ ನಂತರ ಕರ್ಮವನ್ನು ಮಾಡಲು ಆದೇಶಿಸುತ್ತಾನೆ. ನಿತ್ಯಕರ್ಮಗಳನ್ನು ಮಾಡುವಾಗ ಆತ್ಮವಿಸ್ಮೃತಿಯಾಗುವುದು ಸಾಮಾನ್ಯ . ಈ ಆತ್ಮವಿಸ್ಮೃತಿಯಾಗದಂತೆ, ಪ್ರಾಪಂಚಿಕ ಪ್ರಲೋಭನೆಗಳಿಗೆ ತುತ್ತಾಗದಂತೆ ಹೇಗಿರಬೇಕು ಎಂಬುದಕ್ಕಾಗಿ 'ಬುದ್ಧಿಯೋಗ'ವನ್ನು ಉಪಾಸಿಸು ಎಂದು ತಿಳಿಸುತ್ತಾನೆ. ಬುದ್ಧಿಯೋಗವೆಂದರೆ ಮನಸ್ಸು ಮತ್ತು ಇಂದ್ರಿಯಗಳು ತಮ್ಮ ತಮ್ಮ ವ್ಯಾಪಾರಗಳಲ್ಲಿ ತೊಡಗಿರುವಾಗ 'ನಾನು ಆತ್ಮವಸ್ತುವು' ಎಂಬ ಪ್ರಜ್ಞೆ. ಆತ್ಮಾನಾತ್ಮವಿವೇಚನೆಯನ್ನು ಹೊಂದಿದ ಬುದ್ಧಿ, ಧ್ಯಾನಯುಕ್ತವಾದ ಮನಸ್ಸು, ಸಂಯಮದಿಂದ ಕೂಡಿದ ಇಂದ್ರಿಯ ವ್ಯಾಪಾರ, ಫಲಾಪೇಕ್ಷಾರಹಿತವಾದ ಕರ್ಮಯೋಗ, ಇದು ಬುದ್ಧಿಯೋಗದ ಲಕ್ಷಣ. ಕರ್ಮತ್ಯಾಗಕ್ಕಿಂತ, ಕರ್ಮಬಂಧನ ಮುಕ್ತಾವಸ್ಥೆಯು ಬಹುಮುಖ್ಯ. ಕರ್ಮಗಳನ್ನು ಮಾಡುತ್ತಾ, ಕರ್ಮಫಲವನ್ನು ಈಶ್ವರಾರ್ಪಣ ಬುದ್ಧಿಯಿಂದ ತ್ಯಜಿಸಿ, ಅಂತಃಕರಣದಲ್ಲಿ ಆತ್ಮಾನುಸಂಧಾನವನ್ನು ಮಾಡುವ ಪ್ರಜ್ಞಾಸ್ಥಿತಿಯು ಈ ಬುದ್ಧಿಯೋಗ. 'ವ್ಯವಸಾಯಾತ್ಮಿಕಾ ಬುದ್ಧಿ'ಯೆಂದರೆ ಸರಿಯಾದ ಪ್ರಮಾಣಗಳಿಂದ ವಿಚಾರಮಾಡಿ ನಿಶ್ಚಯ ಹೊಂದಿರುವ ಏಕಾಗ್ರ ಮನಸ್ಸುಳ್ಳ ಬುದ್ಧಿ. ಸ್ಥಿರ ಬುದ್ಧಿಯನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ಮಾಡುತ್ತಿರುವ ಪ್ರಯತ್ನ. ಅವ್ಯವಸಾಯಿಗಳ ಬುದ್ಧಿಯು ಅನೇಕ ದಾರಿಯಲ್ಲಿ ಪ್ರಯತ್ನಿಸಿ ಏಕನಿಷ್ಠೆ ಇಲ್ಲದೆ ಚದುರಿ ಹೋಗಿರುವ ಮನಸ್ಸು. ಇಂತಹ ಸ್ಥಿತಿಯು, ಬುದ್ಧಿಯು ನಮ್ಮ ಬಿಗಿ ಹಿಡಿತದಲ್ಲಿ ಇಲ್ಲವೆಂಬುದನ್ನು ಎತ್ತಿ ತೋರಿಸುತ್ತದೆ. ಶ್ರೀರಾಮಕೃಷ್ಣರು ಒಂದು ಕಥೆಯನ್ನು ಹೇಳುತ್ತಾರೆ. ''ಕೆಲವು ಅಡಿ ಅಗಿದು ನೀರು ಬರಲಿಲ್ಲವೆಂದು, ಅನೇಕ ಕಡೆ ಅಗೆದು ಬಾವಿ ತೋಡಿದಂತೆ.''

**ಯೋಗಸ್ಥಃ ಕುರು ಕರ್ಮಾಣಿ** *(೨.೪೮)*, **ಶ್ರುತಿವಿಪ್ರತಿಪನ್ನಾ ತೇ ಯದಾ ಸ್ಥಾಸ್ಯತಿ....** *(೨.೫೩)* ಮುಂತಾದವುಗಳನ್ನು ತಿಳಿದು ಪ್ರಜ್ಞಾಮಟ್ಟವನ್ನು ಮೇಲೇರಿಸಿ, ಬುದ್ಧಿಯನ್ನು ಆತ್ಮದಲ್ಲಿ ಸ್ಥಿರವಾಗಿಸಿ ಯೋಗದಲ್ಲಿದ್ದು ಕೆಲಸ ಮಾಡು ಎಂದು ಶ್ರೀಕೃಷ್ಣನು ಹೇಳಿದನಲ್ಲವೇ, ಇವುಗಳನ್ನೆಲ್ಲಾ ಗ್ರಹಿಸಿದ ಅರ್ಜುನನು ಈ ಪ್ರಶ್ನೆಯನ್ನು ಮಾಡುತ್ತಿದ್ದಾನೆ.

ಸ್ಥಿತಪ್ರಜ್ಞನು ಹೇಗೆ ಮಾತನಾಡುತ್ತಾನೆ? ಹೇಗೆ ಕುಳಿತುಕೊಳ್ಳುತ್ತಾನೆ? ಹೇಗೆ ನಡೆಯುತ್ತಾನೆ? ಅವನ ಮನಸ್ಸಿನ ಸ್ಥಿತಿಯು ಹೇಗಿರುತ್ತದೆ? ಸಮಾಧಿಯು ಹೇಗಿರುತ್ತದೆ? ಎಂಬ ಕುತೂಹಲವನ್ನು ಪ್ರದರ್ಶಿಸುತ್ತಾನೆ. ಮೇಲೆ ಹೇಳಿದ ಮಾತುಗಳನ್ನು ಚೆನ್ನಾಗಿ ಆಲಿಸಿದ ಶ್ರೀಕೃಷ್ಣನು ತಾನೇ '**ಸ್ಥಿತಪ್ರಜ್ಞ**' ಎಂಬ ಶಬ್ದವನ್ನು ನಿಷ್ಪತ್ತಿ ಮಾಡಿದ್ದಾನೆ. ಶಂಕರರು ತಮ್ಮ ಭಾಷ್ಯದಲ್ಲಿ 'ಸ್ಥಿತಾ ಪ್ರತಿಷ್ಠಿತಾ, 'ಅಹಮಸ್ಮಿ ಪರಂ ಬ್ರಹ್ಮ' ಇತಿ ಪ್ರಜ್ಞಾ ಯಸ್ಯ ಸಃ ಸ್ಥಿತಪ್ರಜ್ಞಃ ।' ನಾನು ಪರಬ್ರಹ್ಮನೆಂಬ ಭಾವನೆಯಲ್ಲಿ ಪ್ರತಿಷ್ಠಿತನಾಗಿರುವವನು. ಇಂತಹವನು ಜಗತ್ತಿನೊಡನೆ ಹೇಗೆ ವ್ಯವಹರಿಸುತ್ತಾನೆ? ಅವನ ಬಾಹ್ಯಾಚರಣೆಗಳು ಹೇಗಿರುತ್ತವೆ? ಅವನನ್ನು ಗುರುತಿಸುವುದು ಹೇಗೆ? ಎಂಬುದೇ ಅವನ ಪ್ರಶ್ನೆಯ ಇಂಗಿತವಾಗಿರಬಹುದು.

ಉತ್ತರವೀಯುತ್ತಾ ಶ್ರೀಕೃಷ್ಣನು, ಯಾರು ಮನಸ್ಸಿನಲ್ಲಿ ಹೊಕ್ಕಿರುವ ಎಲ್ಲ ಕಾಮನೆಗಳನ್ನು ಚೆನ್ನಾಗಿ ತ್ಯಜಿಸಿರುವನೋ, ಆತ್ಮನಲ್ಲಿಯೇ ತೃಪ್ತನಾಗಿ, ಬಾಹ್ಯವಸ್ತುವಿನಿಂದ ಸುಖ ಪಡೆಯುವ ಪರವಶತೆ ಯಾರಲ್ಲಿ ಇಲ್ಲವೋ ಅವನನ್ನು ಸ್ಥಿತಪ್ರಜ್ಞನೆನ್ನುತ್ತಾನೆ. ಉಪನಿಷತ್ತಿನ ಸಾರಭೂತವಾದದ್ದು ಗೀತೆ. ಮುಂಡಕದಲ್ಲಿ ಈ ವಿಷಯವನ್ನೇ ಹೇಳಿರುವುದನ್ನು ನೋಡಬಹುದು. **'ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನ್'** *(ಮುಂಡಕ ೩.೧.೪.)* ಆತ್ಮನಲ್ಲಿಯೇ ಆನಂದಿಸಿ, ಎಂದರೆ ಹೊರಗಿನ ಸ್ತ್ರೀ ಅನ್ನ ಪಾನಾದಿ ವಿಷಯಗಳನ್ನು ಭೋಗಕ್ಕಾಗಿ ಬಯಸದೆ, ಕ್ರಿಯಾವಂತನಾಗಿರುವುದು. ಕ್ರಿಯಾವಾನ್ ಎಂಬ ಪದಕ್ಕೆ ಶಂಕರರು 'ಜ್ಞಾನಧ್ಯಾನ ವೈರಾಗ್ಯಾದಿ ಕ್ರಿಯಾ ಯಸ್ಯ ಸೋಽಯಂ ಕ್ರಿಯಾವಾನ್' ಎನ್ನುತ್ತಾರೆ. ಅಂದರೆ ಜ್ಞಾನ, ಧ್ಯಾನ, ವೈರಾಗ್ಯ ಮುಂತಾದವುಗಳನ್ನೂ ಭೋಗಕ್ಕಾಗಿ ಬಯಸದೆ ಕ್ರಿಯಾವಂತನಾಗಿರುವುದು. ಅಂದರೆ ಜ್ಞಾನ, ಧ್ಯಾನ, ವೈರಾಗ್ಯ ಮುಂತಾದವುಗಳನ್ನು ಮನೋವ್ಯಾಪಾರವಾಗಿ ಹೊಂದಿರುವವನು ಎಂಬುದು. ಗೀತೆಯಲ್ಲಿ ಹೇಳುತ್ತಿರುವ ಸ್ಥಿತಪ್ರಜ್ಞ ಲಕ್ಷಣಕ್ಕೆ ಇದು ಸರಿಹೊಂದುತ್ತದೆ. ಅಂದರೆ ಮಹತ್ತಾದ ವಸ್ತುವಿನಲ್ಲಿ ಮಾತ್ರ ಶಾಶ್ವತ ಸುಖವೇ ಹೊರತು ತುಚ್ಛ ಲೌಕಿಕ ವಸ್ತುಗಳಲ್ಲಿಲ್ಲ ಎಂಬುದು. ನಾವು ಚಿಕ್ಕವರಿದ್ದಾಗ ಗೋಲಿ, ಬುಗುರಿ, ಚನ್ನಪಟ್ಟಣ ಕುದುರೆ ಮುಂತಾದ ವಸ್ತುಗಳ ಮೇಲಿದ್ದ ಅದೇ ಸ್ನೇಹ, ವ್ಯಾಮೋಹ ಎಷ್ಟು! ಅದೇ ನಾವು ದೊಡ್ಡವರಾದ ಮೇಲೆ ನಾವಾಡಿದ ಆ ವಸ್ತುಗಳನ್ನು ನೋಡಿದಾಗ, ಹಳೆಯದನ್ನು ನೆನೆದು ನಗು ಬರುತ್ತದೆ. ಹಾಗೆಯೇ ಸ್ಥಿತಪ್ರಜ್ಞನೂ ಕಾಮ, ಕಾಂಚನ, ಹೆಸರು, ಕೀರ್ತಿಗಳ ಹಿಂದೆ ಓಡುತ್ತಿರುವವರನ್ನು ಕಂಡು ನಗುತ್ತಾನೆ. ಹದಿನೈದನೆಯ ಅಧ್ಯಾಯದಲ್ಲಿ ಕ್ಷರಾಕ್ಷರ, ಕೂಟಸ್ಥ ಪುರುಷರ *(೧೫.೧೬)* ವಿಚಾರವಿದೆ. ಉಪಾಧಿ ವಿಶಿಷ್ಟನಾದ ಪರಮಾತ್ಮನ ವಿಭೂತಿಯು – ಕ್ಷರ; ಉಪಾಧಿರಹಿತ

ನಾದ ಪರಮಾತ್ಮನೇ–ಕೂಟಸ್ಥ ಮತ್ತು ಅಕ್ಷರ. ಈ ಸ್ಥಿತಪ್ರಜ್ಞನು ಕೂಟಾವಸ್ಥೆಯಲ್ಲಿದ್ದು ಆಪ್ತಕಾಮನಾಗಿ ಇಂದ್ರಿಯಗಳನ್ನು ಉಪ ಶಮನ ಮಾಡುತ್ತಾ ಜಗತ್ತಿನಲ್ಲಿ ವ್ಯವಹರಿಸುತ್ತಾನೆ. ದುಃಖ ಬಂದಾಗ ಉದ್ವೇಗಗೊಳ್ಳದೆ, ಸುಖ ಬಂದಾಗ ಕುಣಿದು ಕುಪ್ಪಳಿ ಸದೆ, ಸ್ಥಿರವಾದ ಬುದ್ಧಿಯುಳ್ಳವನು ಮುನಿಯು *(೨.೫೬)*. 'ಮನನ ಶೀಲೋ ಮುನಿಃ' ಎನ್ನುತ್ತಾರೆ. ಎಲ್ಲಿಯೂ ಯಾವುದರ ಜೊತೆಗೂ ಅಂಟಿಕೊಳ್ಳುವ ಸ್ವಭಾವವಿರದು. ಇದನ್ನು 'ಅನಭಿ ಸ್ನೇಹತ್ವ' ಎನ್ನುತ್ತೇವೆ. ನಾವು ಯಾವುದೇ ವ್ಯಕ್ತಿಗಳಾಗಲೀ, ವಸ್ತು ವಿಗಾಗಲೀ ಅಂಟಿಕೊಂಡಿದ್ದರೆ, ಅತಿಯಾದ ವ್ಯಾಮೋಹ, ಪ್ರಿಯ ವಾದುದನ್ನು ಕಳೆದುಕೊಳ್ಳುವ ಭಯದಿಂದ ನರಳಾಡುತ್ತಿರು ತ್ತೇವೆ. ಸುಖ ನೀಡುವ ವಸ್ತುವಿನ ಸಮೀಪದಲ್ಲಿದ್ದೂ ನೆಮ್ಮದಿ ಇಲ್ಲ. ಸ್ಥಿತಪ್ರಜ್ಞನು ನಾಟಕದಲ್ಲಿ ನೋಡುವ ಪಾತ್ರಗಳನ್ನೂ settings ಗಳನ್ನೂ ನೋಡುವಂತೆ ನೋಡಿ ಆಸ್ವಾದಿಸುತ್ತಾನೆ. ನಾವು ನಾಟಕ ಸಿನಿಮಾ ನೋಡಿ ಮನೆಗೆ ಬಂದು ಗೊರಕೆ ಹೊಡೆ ಯುತ್ತೇವೆ. ಸ್ಥಿತಪ್ರಜ್ಞರು ನೈಜ ಜೀವನದಲ್ಲಿ ಎಲ್ಲವನ್ನೂ ನಾಟ ಕದ ದೃಶ್ಯಗಳಂತೇನೋ ಎಂಬಂತೆ ನೋಡಿ ವ್ಯವಹರಿಸುತ್ತಾರೆ.

**ಕೂರ್ಮಸಾಮ್ಯ :** ಆಮೆಯು ಅಪಾಯದ ಸುಳಿವು ಸಿಕ್ಕ ಕೂಡಲೇ ತನ್ನ ನಾಲ್ಕು ಕಾಲುಗಳನ್ನೂ, ಕುತ್ತಿಗೆಯನ್ನೂ ಚಿಪ್ಪಿನಲ್ಲಿ ಸುರಕ್ಷಿತವಾಗಿ ಒಳಗೆ ಸೆಳೆದುಕೊಂಡುಬಿಡುತ್ತದೆ. ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮವೆಂಬ ಪಂಚೇಂದ್ರಿಯಗಳು ನಮ್ಮ ಜ್ಞಾನೇಂದ್ರಿಯಗಳು ಹೇಗೆಯೋ ಹಾಗೆ ಎಂಬ ಆಲಂಕಾರಿಕ ಉಪಮೆ. ಈ ಇಂದ್ರಿಯಗಳ ದ್ವಾರಗಳ ಮೂಲಕ ಹೊರ ಹೋಗುವ ಮನಸ್ಸು ಸಾಮಾನ್ಯ ವ್ಯವಹಾರ ಕಾಲದಲ್ಲಿ ಏನೋ ಸರಿ, ಹೊರಹಾಕಬೇಕಾಗುತ್ತದೆ. ಆದರೆ ನಮ್ಮ ಆತ್ಮಶಕ್ತಿಯ ಹನನ ವಾಗುವ ಪ್ರಸಂಗ ಬಂದಾಗ, ತತ್‌ಕ್ಷಣ ಇಂದ್ರಿಯಗಳನ್ನು ಒಳಗೆತೆಗೆದುಕೊಳ್ಳಬೇಕು, ಎಂದರೆ ಆಸಕ್ತಿಯನ್ನು ಹೊಂದ ಬಾರದು ಎಂದು ತಾತ್ಪರ್ಯ. ಹೇಗೆ ನಾವು ತುಂಟ ಮಕ್ಕಳು ಕಣ್ಣು ತಪ್ಪಿಸಿ ಬಾಗಿಲು ದಾಟಲು ಹೋದಾಗ, ಅವರ ಹಿಂದೆ ಕೋಲು ಹಿಡಿದು, ಅವರನ್ನು ನಿಲ್ಲಿಸಿ ಒಳಗೆ ಎಳೆದು, ಅಗುಳಿ ಹಾಕುತ್ತೇವೆಯೋ ಹಾಗೆಯೇ, ಪ್ರತಿಬಾರಿಯೂ ಅಲ್ಲಿ ಅಲ್ಲಿಯೇ ಮನಸ್ಸನ್ನು ಹಿಂತಿರುಗಿಸಿ ಆತ್ಮವಶವನ್ನಾಗಿ ಮಾಡಿಕೊಳ್ಳಬೇಕು. ಇಂತಹ ನಿರಂತರ ಮನೋನಿಗ್ರಹಾಭ್ಯಾಸದಿಂದ ಶಮಸುಖವು ಉಂಟಾಗುತ್ತದೆ. ಮನಶ್ಶಕ್ತಿಯು ಹೆಚ್ಚುತ್ತದೆ. ಇಂದ್ರಿಯ ಪ್ರಲೋ ಭನೆಯನ್ನು ಮಾಡುವ ವಸ್ತುಗಳಿಂದ ಮನಸ್ಸನ್ನು ಹಿಮ್ಮೆಟ್ಟಿಸಿ ದಾಗ ಪ್ರಜ್ಞೆಯು ಆತ್ಮನಲ್ಲಿ ಪ್ರತಿಷ್ಠಿತವಾಗಿರುತ್ತದೆ. **'ಬಲವಾನ್ ಇಂದ್ರಿಯಗ್ರಾಮೋ ವಿದ್ವಾಂಸಮಪಿ ಕರ್ಷತಿ'** *(ಮನುಸ್ಮೃತಿ)*

ಇಂದ್ರಿಯ ಸಮೂಹಗಳು ಬಲವಾಗಿವೆ. ವಿದ್ವಾಂಸನನ್ನೂ ಸುಳಿಯಂತೆ ಸೆಳೆದು ಮುಳುಗಿಸಿ ಬಿಡುತ್ತವೆ. **''ಆಹಾರ- ನಿದ್ರಾ -ಭಯ-ಮೈಥುನಾನಿ ಸಾಮಾನ್ಯಮೇತತ್ ಪಶುಭಿರ್ನರಾಣಾಮ್''** -ಸುಭಾಷಿತ. ಆಮೆಯ ಉಪಮಾನವು ಬಲು ಸೊಗಸಾಗಿದೆ. ಸಾತ್ತ್ವಿಕತೆ ಮತ್ತು ಸುರಕ್ಷಿತತೆಗೆ ಹೆಚ್ಚು ಒತ್ತು ಕೊಡುವ, ಮೌನ ವಾದ, ದೀರ್ಘಶ್ವಾಸವುಳ್ಳ ಪ್ರಾಣಿ ಆಮೆ. ಅಷ್ಟು ಜಾಗರೂಕ ವಾಗಿರುವುದರಿಂದಲೇ ೩೦೦-೪೦೦ ವರ್ಷಕ್ಕೂ ಹೆಚ್ಚು ಕಾಲ ಬದುಕುವ ಸಾಮರ್ಥ್ಯವುಳ್ಳ ದೀರ್ಘಾಯು ಜೀವಿ.

ನಮ್ಮ ಹಿಂದೂಧರ್ಮದಲ್ಲಿ ಉಪವಾಸಾದಿ ವ್ರತಗಳು ಬಹಳ. ಅನೇಕರು ಇದನ್ನು ಆಚರಿಸುತ್ತಾರೆ. ಆದರೂ ನಮಗೆ ಭೋಗದಾಸೆಯು ಕಡಿಮೆಯಾಗಿ ಭಗವಂತನೇ ಬೇಕೆಂಬ ಭಕ್ತಿಯು ತೀವ್ರವಾಗುತ್ತಿಲ್ಲವಲ್ಲ ಏಕೆ? ಉಪವಾಸ, ಕಣ್ಣು ಮುಚ್ಚಿ ಕೂಡು ವುದು, ಮೌನ, ಬ್ರಹ್ಮಚರ್ಯ ಮುಂತಾದವನ್ನು ಮಾಡುತ್ತಿರು ವುದು ಅದಕ್ಕಾಗಿಯೇ ತಾನೆ? ಇದಕ್ಕೆ ಉತ್ತರವಿಲ್ಲಿದೆ *(೨.೫೯)*. ಇಂತಹ ಯೋಗಾಚರಣೆಗಳನ್ನು ದೀರ್ಘಕಾಲ ಮಾಡಿದಾಗ ವಿಷಯವಾಸನೆಗಳು ಹತೋಟಿಯಲ್ಲಿರುವಂತೆ ಏನೋ ಕಾಣು ತ್ತದೆ. ಜ್ವರ ಬಂದಾಗ ನಾಲಿಗೆ ಕೆಟ್ಟು 'ಏನೂ ಬೇಡಪ್ಪ' ಎನಿಸುವ ಹಾಗೆ. ಅಥವಾ ವ್ರತಗಳನ್ನು ಕೆಲವು ಕಾಲ ಮಾಡಿದ ನಂತರ ಅದರಿಂದ ಅಗತ್ಯವಾದ ಪುಣ್ಯಾರ್ಜನೆಯು ಆಗಿಬಿಡುತ್ತದೆ ಎಂಬ ಭಾವನೆಯೂ ಸಹ ಇದೆ. ವ್ರತಾದಿಕಾಲಗಳಲ್ಲಿ ಇಂದ್ರಿಯ ಸಂಯಮ ಮಾಡಿದರೆ ಸಾಕು ಎಂಬುವ ರೀತಿ. ಶ್ರೀರಾಮ ಕೃಷ್ಣರು ಹೇಳುತ್ತಾರೆ, 'ವಿಷಮ ಶೀತ ಜ್ವರ ಹೊಂದಿರುವವನನ್ನು ಉಪ್ಪಿನಕಾಯಿ ಮತ್ತು ನೀರಿರುವ ಕೋಣೆಯಲ್ಲಿ ಮಲಗಿಸ ಬಾರದು' ಎಂದು. ಅವನು ಹೇಳುತ್ತಾನಂತೆ, 'ಜ್ವರ ಬಿಡಲಿ, ನಾನು ಒಂದು ಜಾರ್ ಉಪ್ಪಿನಕಾಯಿ ತಿನ್ನುತ್ತೇನೆ, ಒಂದು ಗಡಿಗೆ ನೀರು ಕುಡಿಯುತ್ತೇನೆ' ಎಂದು. ಇಂದ್ರಿಯಭೋಗ ರಸವು ಮನಸ್ಸಿನಲ್ಲಿ ಇನ್ನೂ ಇಂಗಿರುವುದಿಲ್ಲ. ಭೋಗದ ಗೈರುಹಾಜರಿ ಯಿಂದ ಯೋಗದಂತೆ ಕಾಣುತ್ತದೆ. ಸಮ್ಯಗ್ ದರ್ಶನವಾದ ನಂತರವೇ ರಸನಾಶವಾಗುವುದು. ಅಲ್ಲಿಯವರೆಗೂ ನಿಗ್ರಹ ಆವ ಶ್ಯಕ. ೧) **ಯೋ ವೈ ಭೂಮಾ ತತ್ಸುಖಮ್ ನಾಲ್ಪೇ ಸುಖಮಸ್ತಿ** *(ಛಾಂ. ೭.೨೩.೧)* **ಭೂಮ್ಯೆವ ಸುಖಂ ಭೂಮಾ ತ್ವೇವ ವಿಜಿ ಜ್ಞಾಸಿತವ್ಯ ಇತಿ. ಭೂಮಾನಂ ಭಗವೋ ವಿಜಿಜ್ಞಾಸ ಇತಿ.** ೨) **ಯೋ ವೈ ಭೂಮಾ ತದಮೃತಮಥ ಯದಲ್ಪಂ ತನ್ಮರ್ತ್ಯಗ್ಂ** *(ಛಾಂ. ೭.೨೪.೧)*

ಇನ್ನು ಗೀತೆಯಲ್ಲಿ ವಿಷಯ, ವಿಷಯಾಸಕ್ತಿ ಮತ್ತು ಅವುಗಳ ದುಷ್ಪರಿಣಾಮಗಳನ್ನು ವಿವರಿಸುತ್ತಾ ಹೋಗುತ್ತಾನೆ. *(೨.೬೨ -೬೭)* ವಿಷಯ ಚಿಂತನೆಗಳು ಪ್ರಬಲವಾದ ಅಲೆಗಳು ಅಥವಾ ಸುಂಟರ ಗಾಳಿಯಂತೆ. ನಮ್ಮ ಸಾಧನಾ ನೌಕೆಯು ಸಂಸಾರವೆಂಬ ಸಮುದ್ರ ವನ್ನು ದಾಟಲು ಯತ್ನಿಸುತ್ತಿರುವಾಗ, ಒಂದು ಸಣ್ಣ ರಂಧ್ರ ವಿದ್ದರೂ ಸಾಕು ನೀರು ನುಗ್ಗಿ ಮುಳುಗಿಸಿಬಿಡುತ್ತದೆ. ಇಂದ್ರಿಯ ದ್ವಾರಗಳ ಮೂಲಕ ಬೀಸುವ ಗಾಳಿಯು ನಮ್ಮ ಸಾಧನಾ ದೋಣಿ ಯನ್ನು ಎಳೆದು ಎತ್ತಲೋ ಹಾಕಿಬಿಡುತ್ತದೆ *(೨.೬೭)*. ಕೊಂಚ ವಿವೇಕ ಪ್ರಜ್ಞೆಯನ್ನು ಕಳೆದುಕೊಂಡಿದ್ದರ ಪರಿಣಾಮ. ವಿಷಯ ಸುಖಗಳನ್ನು ಅನುಭವಿಸುವುದಿರಲಿ ಧ್ಯಾನಿಸಿದರೆ ಸಾಕು

ಪ್ರೀತಿ-ಸ್ನೇಹ ಉಂಟಾಗಿ ಆಕರ್ಷಣೆ ಹೆಚ್ಚಾಗಿ ಬಿಡುತ್ತದೆ. ಆಕರ್ಷಣೆಯಿಂದ ಹೊಂದುವ ಆಸೆಯಿಂದ ಕಾಮವುಂಟಾಗುತ್ತದೆ. ಈ ಬಯಕೆಯ ಪೂರೈಕೆಯ ಪ್ರಯತ್ನಕ್ಕೆ ಯಾರಾದರೂ, ಯಾವುದಾದರೂ ಅಡ್ಡಿ ಬಂದಾಗ ಕ್ರೋಧವುಂಟಾಗುತ್ತದೆ. ಈ ನಮ್ಮ ಮನದಲ್ಲಿ ಕಾಮ-ಕ್ರೋಧವೆಂಬ ಎರಡೂ ಬೆಂಕಿಯಾಗಿ ಹತ್ತಿಕೊಂಡು ಉರಿಯುತ್ತಿದೆ. ಇವೆರಡರ ಘರ್ಷಣೆಯಿಂದ ಕಾರ್ಯ-ಅಕಾರ್ಯ(Do's and dont's) ವಿಷಯಗಳಲ್ಲಿ ಅವಿವೇಕ ಉಂಟಾಗಿಬಿಡುತ್ತದೆ. ಅಷ್ಟು ವರ್ಷಗಳು ಮಾಡಿದ ದೀರ್ಘಪ್ರಯತ್ನ, ಸತ್ಕಾರ್ಯ, ಉಪದೇಶ, ಸ್ವಾಧ್ಯಾಯಗಳ ಅನುಸಂಧಾನವು ಇಲ್ಲದ ಸ್ಥಿತಿ (ಸ್ಮೃತಿನಾಶ-ಸ್ಮೃತಿಭ್ರಂಶ) ಉಂಟಾಗುತ್ತದೆ. ಇದಾದ ಮೇಲೆ ವ್ಯವಸಾಯಾತ್ಮಿಕ ಬುದ್ಧಿಯಿಂದ ಹೊಂದಿದ ಬುದ್ಧಿನಾಶವಾಗುತ್ತದೆ. ಅಲ್ಲಿಗೆ ಮುಗಿಯಿತು. ಮನುಷ್ಯನು ನಾಶವಾದಂತೇ ಸರಿ ಅಂದರೆ ಪರಮ ಪುರುಷಾರ್ಥಕ್ಕಾಗಿ ಸಂಪಾದಿಸಿದ್ದನ್ನೆಲ್ಲಾ ಕ್ಷಣಮಾತ್ರದಲ್ಲಿ ಕಳೆದುಕೊಳ್ಳುತ್ತಾನೆ. ಶಂಕರರು ವಿವೇಕಚೂಡಾಮಣಿಯಲ್ಲಿ ಹೇಳುತ್ತಾರೆ:

**ಲಕ್ಷ್ಯಚ್ಯುತಂ ಚೇದ್ಯದಿ ಚಿತ್ತಮೀಷದ್**
**ಬಹಿರ್ಮುಖಂ ಸನ್ನಿಪತೇತ್ ತತಸ್ತತಃ ।**
**ಪ್ರಮಾದತಃ ಪ್ರಚ್ಯುತ-ಕೇಲಿ-ಕಂದುಕಃ**
**ಸೋಪಾನಪಂಕ್ತೌ ಪತಿತೋ ಯಥಾ ತಥಾ ॥** *(೩೨೪)*

ಇಲ್ಲಿ ಮನಸ್ಸನ್ನು ಮೆಟ್ಟಿಲ ಮೇಲಿನಿಂದ ಬೀಳುತ್ತಾ ಬೀಳುತ್ತಾ ನೆಲಮಟ್ಟವನ್ನು ಹೊಂದುವ ಆಟದ ಚೆಂಡಿಗೆ ಹೋಲಿಸುತ್ತಾರೆ. ಮಧುಸೂದನ ಸರಸ್ವತಿಗಳು 'ಗೂಢಾರ್ಥದೀಪಿಕೆ'ಯಲ್ಲಿ 'ನೋಡು ನೋಡುತ್ತಿದ್ದಂತೆಯೇ ಬಲಶಾಲಿಗಳಾದ ಕಳ್ಳರು ಶ್ರೀಮಂತನನ್ನು, ಅಂಗರಕ್ಷಕರನ್ನು ಸದೆಬಡಿದು ಸಂಪತ್ತನ್ನು ಹೇಗೆ ಕಣ್ಣಮುಂದೆಯೇ ಅಪಹರಿಸುವರೋ ಹಾಗೆಯೇ ಮನಮಂದಿರದಲ್ಲಿ ಕಳ್ಳತನವಾಗಿಬಿಡುತ್ತದೆ' ಎನ್ನುತ್ತಾರೆ.

**ಈ ಎದೆಯ ಕೊರೆಯುವುದು ಒಂದು ವ್ಯಥೆ ನನಗೆ;**
**ನೀನೊಡನೆಯಿದ್ದರೂ ನಾನೆಚ್ಚರಿದ್ದರೂ**
**ಕಳ್ಳತನವಾಯಿತಲ್ಲ ನನ್ನ ಮನೆಯೊಳಗೆ!**

*— ವಚನವೇದ*

ಸ್ಮೃತಿಭ್ರಂಶವಾದಾಗ ಸನ್ನಿವೇಶವೇನು, ಸುತ್ತಮುತ್ತ ಯಾರಿದ್ದಾರೆ ಎಂಬ ವಿವೇಚನೆಯನ್ನು ಕಳೆದುಕೊಂಡ ಸ್ಥಿತಿಯುಂಟಾಗುತ್ತದೆ. ಅದು ಹೇಗೆಂದರೆ, ಗುಮಾಸ್ತನು ತನ್ನ ಅಧಿಕಾರಿಯ ಮೇಲೆ ತಡೆಯಲಾರದ ಕೋಪದಿಂದ ಕೆಲಸ ಕಳೆದುಕೊಂಡರೆ ಏನು ಗತಿಯೆಂಬ ಪರಿಜ್ಞಾನವಿಲ್ಲದೆ ಅವಾಚ್ಯಶಬ್ದಗಳಿಂದ ಬೈದು, ಕಪಾಳಮೋಕ್ಷ ಮಾಡಿದನಂತೆ. ಕೋಪದ ಅತಿರೇಕದಲ್ಲಿ ವ್ಯಕ್ತಿಯು 'ತಾತ್ಕಾಲಿಕ ಹುಚ್ಚನಾಗಿರುತ್ತಾನೆ' ಎಂದು ಮನೋವಿಜ್ಞಾನ ಹೇಳುತ್ತದೆ. ಇಂತಹ ಭ್ರಮಾಸ್ಥಿತಿಯಲ್ಲಿಯೇ ಕೊಲೆ ಮುಂತಾದ ಅಚಾತುರ್ಯ ನಡೆದು ಹೋಗುತ್ತದೆ. ದೇಹವು ಕಂಪಿಸುತ್ತಾ, ನಾಲಿಗೆ ತೊದಲಿ, ಕೈಕಾಲುಗಳ ಮೇಲೆ ಹತೋಟಿಯೂ ತಪ್ಪಿ ಹೋಗುತ್ತದೆ. ಮತ್ತೆ ಮತ್ತೆ ಈ ಸ್ಥಿತಿಯನ್ನು ಹೊಂದಿ ಮಾತಿನ ಕಾರ್ಯಗಳಿಂದ ಮನುಷ್ಯ ದುರ್ಬಲಗೊಂಡು ಪಾಪಿಷ್ಠನಾಗುತ್ತಾನೆ. ಇಂತಹ ಸ್ಥಿತಿಗೆ ಒಯ್ದ ಮನಸ್ಸನ್ನು ಹಿಂಪಡೆಯಲಾಗುವುದಿಲ್ಲ. ಇಂತಹ ಅಧಃಪತನದ ತುದಿಯವರೆಗೂ ಮನಸ್ಸನ್ನು ಎಂದಿಗೂ ಕೊಂಡೊಯ್ಯಬಾರದು. ಅಂತಹ ಸ್ಥಿತಿಯಿಂದ ಮೇಲೆತ್ತಲು ದುಸ್ಸಾಧ್ಯ. ಆತ್ಮನಿಗೆ ಸರ್ವನಾಶವೆಂಬುದು ಇಲ್ಲವೇನೋ ಸರಿ. ಆದರೆ ಮತ್ತೆ ಮೊದಲಿನಿಂದ ಆರಂಭಮಾಡಬೇಕಾಗುತ್ತದೆ. ಮರಳಿ ಹೊಸ ಯತ್ನ ಮಾಡಬೇಕಾಗುತ್ತದೆ.

'ಆದ್ದರಿಂದ ಎಲೈ ಅರ್ಜುನ! ಯಾರು ಇಂದ್ರಿಯ ವಿಷಯಗಳಾದ ಶಬ್ದ, ಸ್ಪರ್ಶಾದಿಗಳನ್ನು ಜಗ್ಗಿ ಹಿಡಿಯುವನೋ ಅವನ ಬುದ್ಧಿಯು ಆತ್ಮನಲ್ಲಿ ಪ್ರತಿಷ್ಠಿತವಾಗಿರುತ್ತದೆ' *(೨.೬೮).* ನಮ್ಮ ಸುಪ್ತ ಮನಸ್ಸಿನಲ್ಲಿ ಹಳೆಯ ಇಂದ್ರಿಯ ವ್ಯಾಪಾರಗಳಿಂದುಂಟಾದ ಅಸಂಖ್ಯ ಆಲೋಚನೆಗಳು, ಭಾವನೆ, ಸಂಕಲ್ಪ-ವಿಕಲ್ಪಾದಿಗಳು, ವಾಸನೆ, ಸಂಸ್ಕಾರ ಮುಂತಾದವೂ ಮನೋಸರೋವರದಲ್ಲಿ ಅಲೆಗಳನ್ನು ಎಬ್ಬಿಸುತ್ತಲೇ ಇರುತ್ತವೆ. ಇನ್ನೊಂದೆಡೆ ದೈನಂದಿನ ಲೌಕಿಕ ವ್ಯವಹಾರಗಳಿಂದ ಉಂಟಾಗುವ ಬಾಹ್ಯಸ್ಪರ್ಶ, ಅರಿವು(cognition), ರಾಗದ್ವೇಷ, ಸೋಲು-ಗೆಲುವು, ಶುಭಾಶುಭ, ಪುಣ್ಯಾ-ಪುಣ್ಯ ಮುಂತಾದವೂ ಮನಸ್ಸಿನ ಪರಿಣಾಮವನ್ನು ಸಂಸ್ಕಾರವನ್ನೂ ಮಾಡುತ್ತಲೇ ಇರುತ್ತವೆ.

ನಮಗೆ ಎಲ್ಲಾ ವಿಷಯಗಳ ಜೊತೆ ಅಂಟುವ ಗುಣವಿರುವುದರಿಂದ (ಅಭಿಸ್ನೇಹ) ಇವುಗಳು ಮಸಿ ಅದ್ದಿದ ರಬ್ಬರ್ ಸ್ಟಾಂಪಿನಂತೆ ಅಗಣಿತವಾದ ಮುದ್ರೆಯನ್ನು ನಮ್ಮ ಮನಸ್ಸಿನ ತೆರೆಯ ಮೇಲೆ ಒಳಗೂ ಹೊರಗಿನಿಂದ ಒತ್ತಿಬಿಟ್ಟಿರುತ್ತದೆ. ಆದರೆ ಸ್ಥಿತಪ್ರಜ್ಞನ ಅವಸ್ಥೆ ಹೇಗಿರುತ್ತದೆಂದರೆ ಅಂತಹ ಆಂತರಿಕ ಆಲೋಚನೆಗಳು, ಬಾಹ್ಯ ಇಂದ್ರಿಯ ವ್ಯಾಪಾರಗಳಿದ್ದರೂ ಮಸಿ ಅದ್ದದೇ ಒತ್ತುವ ರಬ್ಬರ್ ಸ್ಟಾಂಪಿನಂತೆ, ಯಾವುದೇ ಗುರುತನ್ನು (ಅನಭಿಸ್ನೇಹ) ಉಂಟುಮಾಡುವುದಿಲ್ಲ. ಇಂದ್ರಿಯ, ಅಂತಃ ಕರಣಗಳು ಅವನಿಚ್ಛೆಯಂತೆ ವರ್ತಿಸುವುದೇ ಹೊರತು ಅವನು ಅವುಗಳ ವಶನಾಗಿರುವುದಿಲ್ಲ. ಅಕ್ಷಯಕುಮಾರನು ತೀರಿಕೊಂಡಾಗ ಶ್ರೀ ರಾಮಕೃಷ್ಣರು ಅತಿಯಾಗಿ ದುಃಖವನ್ನು ಪಡುತ್ತಾರೆ.

ಈ ರೀತಿ ಅವರು ವರ್ತಿಸಿದರೂ ಸಹ ಅವರ ಆಂತರ್ಯದಲ್ಲಿ ಯಾವುದೇ ಅಭಿಸ್ನೇಹವಿರುವುದಿಲ್ಲ. ಇದು ಸ್ಥಿತಪ್ರಜ್ಞನ ಲಕ್ಷಣ. ಇಂತಹ ಪ್ರಸನ್ನಾತ್ಮನಿಗೆ *(೨.೬೫)* ಸರ್ವದುಃಖಗಳ ನಾಶವಾಗಿರುತ್ತವೆ. ಇವನ ಮನಸ್ಸೇ ಇಂದ್ರಿಯಗಳ ದ್ವಾರದ ಮೂಲಕ ಬೀಸುವ ಗಾಳಿಯಿಂದ ಅಪಹರಿಸಲ್ಪಡುವುದಿಲ್ಲ. ಎಲ್ಲ ಅನರ್ಥಕ್ಕೂ ಕಾರಣ ಇಂದ್ರಿಯ ಪ್ರಲೋಭನೆ, ಅಪಾಯಕ್ಕೆ ಮುನ್ನವೇ ಮಾಡದ ಇಂದ್ರಿಯ ನಿಗ್ರಹ, ನಿರ್ಲಕ್ಷ್ಯದಿಂದ ಎಂತಹ ದುಃಸ್ಥಿತಿಗೆ ತಳ್ಳುವುದು ಎಂದು ಮೊದಲೇ ಮನಗಂಡು ಎಲ್ಲ ಕಡೆಗಳಿಂದಲೂ ಇಂದ್ರಿಯಗಳನ್ನು ನಿಗ್ರಹಿಸಿದಾಗ ಪ್ರಜ್ಞೆಯು

ಪ್ರತಿಷ್ಠಿತ *(೨.೬೮)* ಎಂದರೆ ಕೂಟಾವಸ್ಥೆಯಲ್ಲಿ ಸ್ಥಿರವಾಗಿ ನಿಂತಿರುತ್ತದೆ.

## ರಾತ್ರಿಯೇ ಹಗಲು – ಹಗಲೇ ರಾತ್ರಿ

ಜ್ಞಾನಿಯಾದ ಸ್ಥಿತಪ್ರಜ್ಞನ ಸ್ಥಿತಿಯನ್ನು *(೨.೬೯)* ಆಲಂಕಾರಿಕ ಭಾಷೆಯಲ್ಲಿ ವರ್ಣಿಸಲಾಗಿದೆ. ಸಾಮಾನ್ಯ ಮನುಷ್ಯರು ಪ್ರಾಪಂಚಿಕ ವಿಷಯ ವಸ್ತುಗಳ ಹಿಂದೆ ಬೆಂಬಿಡದೇ ಓಡುತ್ತಿರುತ್ತಾರೆ. ಸಂಮೋಹದಿಂದ ಬಿಡಿಸಿಕೊಂಡ ಯೋಗಿಗೆ ಇವುಗಳೆಲ್ಲ ಕ್ಷುಲ್ಲಕ ವಸ್ತುಗಳು. ಇವನಿಗೆ ಕೋಣೆಯ ಕತ್ತಲಲ್ಲಿ ಕಾಣದೇ ಇರುವ ಮೇಜು ಕುರ್ಚಿ ಮುಂತಾದ ವಸ್ತುಗಳ ಹಾಗೆ. ಇದ್ದರೂ ಇಲ್ಲದ ಹಾಗೆ, ನುಡಿದರೂ ಅದಿಲ್ಲವೇನೋ ಎಂಬಂತಿರುತ್ತಾನೆ. ಪ್ರಾಪಂಚಿಕರಿಗೆ ಅವೆಲ್ಲ ಇರಲೇಬೇಕಾದ ಭೋಗ ಪ್ರಪಂಚ. ಆತ್ಮ ವಿಚಾರ, ಅನುಭವಗಳ ಬಗ್ಗೆ ಕುತೂಹಲವಿಲ್ಲ. ಅವರಿಗೆ ಗೋಚರವಾಗುವುದೇ ಇಲ್ಲ. ಆದರೆ ಯೋಗಿಯು ಈ ಆತ್ಮವಸ್ತುವಿನಲ್ಲಿ ಎಚ್ಚರವಿರುತ್ತಾನೆ. ಇಬ್ಬರ ದೃಷ್ಟಿಕೋನ, ಅಸ್ತಿತ್ವವೂ ಭೂಮಿಕೆಯೂ ಪರಸ್ಪರ ವಿರುದ್ಧವೆಂದು ಹೇಳುವ ರೀತಿ. ಹೇಗೆ ನದಿಗಳು ಎಲ್ಲೆಡೆಯಿಂದ ಹರಿದು ಕಡಲನ್ನು ಪ್ರವೇಶಿಸಿದರೂ, ಸಮುದ್ರವು ಉಕ್ಕಿ ಹರಿಯದೇ ಗಾತ್ರದಲ್ಲಿ ವ್ಯತ್ಯಾಸವನ್ನೇ ಹೊಂದುವುದಿಲ್ಲವೋ ಹಾಗೆಯೇ ಎಲ್ಲ ಕಾಮನೆಗಳು ಇವನನ್ನು ಪ್ರವೇಶಿಸಿದರೂ ವಿಕಾರಹೊಂದದೆ ಲಯವನ್ನೇ ಹೊಂದುವವು. ಇವನು ಶಾಂತಿಯನ್ನು ಹೊಂದುವನೇ ಹೊರತು ವಿಷಯವಸ್ತುಗಳನ್ನು ಬಯಸುವ ಕಾಮಿಯು ಹೊಂದುವುದಿಲ್ಲ.

ಯೋಗವೆಂದರೆ ಸಮತ್ವ. **ಪ್ರಜ್ಞಾನಂ ಬ್ರಹ್ಮ** *(ಐತರೇಯ, ೩.೧)* 'ಬ್ರಹ್ಮವು ಶುದ್ಧಪ್ರಜ್ಞೆ', ಪ್ರಜ್ಞಾನದ ಘನೀಭೂತಾವಸ್ಥೆ. ಸೂರ್ಯಚಂದ್ರರನ್ನೂ ಬೆಳಗುವುದು ಈ ಪ್ರಜ್ಞಾಜ್ಯೋತಿ. ಇಂತಹ ಪ್ರಜ್ಞಾವಸ್ಥೆಯಲ್ಲಿ ಸಂಸ್ಥಿತವಾದ ಸ್ಥಿತಿಯನ್ನು ಬ್ರಾಹ್ಮೀಸ್ಥಿತಿ ಯೆಂದು *(೨.೭೨)* ಕರೆಯುತ್ತಾನೆ. ಇಂದ್ರಿಯ ಮನಸ್ಸುಗಳ ನಿಗ್ರಹ ಮತ್ತು ಪರಿಶುದ್ಧತೆಯ ಅಭ್ಯಾಸ ಮತ್ತು ಪರಿಶ್ರಮದಿಂದ ಹೊಂದಿದ ಯೋಗಾರೂಢಸ್ಥಿತಿ. ಶ್ರೀರಾಮಕೃಷ್ಣರು ಹೇಳುತ್ತಾರೆ 'ಶುದ್ಧ ಮನಸ್ಸೇ, ಶುದ್ಧ ಆತ್ಮ' ಎಂದು. ಬ್ರಹ್ಮಭಾವವನ್ನು ಹೊಂದುವವರೆಗೂ ಯಾವುದೇ ಮೋಹಕ್ಕೊಳಗಾಗಿ ಮುಗ್ಗರಿಸದೆ ಬ್ರಹ್ಮನಿರ್ವಾಣವೆಂಬ, ಸರ್ವಸಂಸಾರ ದುಃಖ ಉಪಶಮನ ಲಕ್ಷಣವುಳ್ಳ ಸ್ಥಿತಿ. ಕೊನೆಯ ವಯಸ್ಸಿನಲ್ಲಿದ್ದಾಗ ಪಡೆದು ಕೊಂಡರೂ ಸಹ ಬ್ರಹ್ಮದಲ್ಲಿ ನೆಲೆಸುತ್ತಾನೆ. ಇದೇ ಚರಮಸ್ಥಿತಿ. ಇವನಿಗೆ ಸಂಸಾರಚಕ್ರದ ಪುನರಾಗಮನದ ಭಯವಿಲ್ಲ. ಶಾಶ್ವತವಾದ ಪದವನ್ನು ಹೊಂದುತ್ತಾನೆ.

ಯುವಚೇತನ



## ಗೀತೆಯ ವೈಶಿಷ್ಟ್ಯಗಳು

**ಈ**ಗ ಗೀತೆಯ ಕೆಲವು ಮುಖ್ಯ ವಿಷಯಗಳನ್ನು ತೆಗೆದುಕೊಳ್ಳೋಣ. ಗೀತೆ ಅದಕ್ಕೆ ಹಿಂದೆ ಇದ್ದ ಶಾಸ್ತ್ರಗಳಿಗಿಂತ ಯಾವ ವಿಧದಲ್ಲಿ ವಿಶೇಷವಾಗಿರುವುದು? ಅದೇ ಇದು: ಗೀತೆಗೆ ಮುಂಚೆ ಜ್ಞಾನ, ಭಕ್ತಿಯೋಗಗಳ ಕಟ್ಟಾ ಅನುಯಾಯಿಗಳಿದ್ದರೂ, ಎಲ್ಲರೂ ತಮ್ಮ ತಮ್ಮೊಳಗೆ ಕಾದಾಡುತ್ತಿದ್ದರು. ಪ್ರತಿಯೊಬ್ಬರೂ ತಮ್ಮದೇ ಶ್ರೇಷ್ಠಮಾರ್ಗ ಎಂದು ಹೇಳುತ್ತಿದ್ದರು. ಯಾರೂ ಭಿನ್ನ ಭಿನ್ನ ಮಾರ್ಗಗಳನ್ನು ಸೌಹಾರ್ದಭಾವದಿಂದ ನೋಡಲು ಯತ್ನಿಸಲಿಲ್ಲ. ಗೀತೆಯ ಕರ್ತೃ ಪ್ರಥಮಬಾರಿಗೆ ಇವುಗಳನ್ನು ಒಂದು ಸೌಹಾರ್ದದೃಷ್ಟಿಯಿಂದ ನೋಡಲು ಯತ್ನಿಸಿದನು. ಆಗಿನ ಕಾಲದಲ್ಲಿ ಪ್ರತಿಯೊಂದು ಪಂಥದವರೂ ಕೊಟ್ಟ ಶ್ರೇಷ್ಠ ಭಾವನೆಗಳನ್ನೆಲ್ಲಾ ತೆಗೆದುಕೊಂಡು ಅದನ್ನೆಲ್ಲಾ ಗೀತೆಯಲ್ಲಿ ಪೋಣಿಸಿರುವನು. ಎಲ್ಲಿ ಶ್ರೀಕೃಷ್ಣನು ಕೂಡಾ ಸಮನ್ವಯವನ್ನು ತರಲು ಸಾಧ್ಯವಾಗಲಿಲ್ಲವೋ ಅಲ್ಲಿ ಶ್ರೀರಾಮಕೃಷ್ಣರು ಹತ್ತೊಂಬತ್ತನೇ ಶತಮಾನದಲ್ಲಿ ಅದನ್ನು ಸಾಧಿಸಿದರು.

ಅನಂತರವೇ ನಿಷ್ಕಾಮಕರ್ಮ. ಈಗ ಜನರು ಅದನ್ನು ಬಹುವಿಧಗಳಲ್ಲಿ ಅರ್ಥಮಾಡಿಕೊಳ್ಳುವರು. ಅನಾಸಕ್ತಿ ಎಂದರೆ ಗೊತ್ತುಗುರಿ ಇಲ್ಲದೆ ಕೆಲಸ ಮಾಡುವುದು ಎಂದು ಕೆಲವರು ಭಾವಿಸುವರು. ಇದೇ ನಿಜವಾದ ಅರ್ಥ ಎಂದಾದರೆ ನಿರ್ದಯರಾದ ಮೂಢರು ಮತ್ತು ಗೋಡೆಗಳು ನಿಷ್ಕಾಮಕರ್ಮಕ್ಕೆ ಉದಾಹರಣೆಯಾಗುವುವು. ಮತ್ತೆ ಕೆಲವರು ಜನಕನ ಉದಾಹರಣೆ ಕೊಡುವರು. ತಾವೇ ನಿಷ್ಕಾಮಕರ್ಮದಲ್ಲಿ ನಿಪುಣರು ಎಂದು ಜನ ಭಾವಿಸಲಿ ಎಂಬ ಕುತೂಹಲ ಅವರಿಗೆ. ಆದರೆ ಜನಕ ಸಂತಾನೋತ್ಪತ್ತಿಯಿಂದ ನಿಷ್ಕಾಮಕರ್ಮಕ್ಕೆ ಉದಾಹರಣೆಯಾಗಲಿಲ್ಲ. ಆದರೆ ಇವರೆಲ್ಲ ಒಂದು ಮಕ್ಕಳ ಪಡೆಗೆ ತಂದೆಯಾಗಿರುವುದೊಂದೆ ಇವರ ವಿಶೇಷ ಅರ್ಹತೆ! ಇದರಿಂದಲೇ ಇವರು ಜನಕರಾಗಬಯಸುವರು. ಹಾಗಲ್ಲ, ನಿಜವಾದ ನಿಷ್ಕಾಮಕರ್ಮಿ ಮೂಢನೂ ಇಲ್ಲ, ಜಡನೂ ಅಲ್ಲ, ನಿರ್ದಯನೂ ಅಲ್ಲ. ಅವನು ತಾಮಸಿಕನಲ್ಲ. ಶುದ್ಧ ಸಾತ್ತ್ವಿಕ ಸ್ವಭಾವದವನು. ಅವನ ಹೃದಯ ಪ್ರೀತಿ ಸಹಾನುಭೂತಿಗಳಿಂದ ತುಂಬಿ ತುಳುಕಾಡುತ್ತಿರುವುದು. ಅವನು ಇಡೀ ವಿಶ್ವವನ್ನು ಪ್ರೀತಿಯಿಂದ ಆಲಿಂಗಿಸಬಲ್ಲ. ಜಗತ್ತು ಅವನ ಪ್ರೀತಿಯನ್ನು, ವಿಶ್ವಕಾರುಣ್ಯವನ್ನು ಸಾಧಾರಣವಾಗಿ ಅರಿಯಲಾರದು.

ಭಿನ್ನ ಭಿನ್ನ ಮಾರ್ಗಗಳ ಸಮನ್ವಯ ಮತ್ತು ನಿಷ್ಕಾಮಕರ್ಮ ಇವೇ ಗೀತೆಯ ಎರಡು ಮುಖ್ಯ ವೈಶಿಷ್ಟ್ಯಗಳು.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೭, ಪು.೮೩–೮೪)*